ಕರ್ನಾಟಕ ಸರ್ಕಾರ

:: ಬೆಂಗಳೂರು ನಗರ ಜಿಲ್ಲಾ ಪಂಚಾಯಿತ್ ::

ಉಪನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ, ಕಲಾಸಿಪಾಳ್ಯ, ಬೆಂಗಳೂರು-02.

ಸಂಖ್ಯೆ ಅರ-4(ಅ8) ಖಾ ಶಾ ಹೆಸರು ಬದ -02/2026-27 ದಿನಾಂಕ:23-04-2026

## -:ಜ್ಞಾಪನಾ:-

**ವಿಷಯ:** M A R K ಎಜುಕೇಷನಲ್ ಅಂಡ್ ಕಲ್ಚರಲ್ ಟ್ರಸ್ಟ್ ಈ ಆಡಳಿತ ಮಂಡಳಿಯ ವತಿಯಿಂದ ನಡೆಸುತ್ತಿರುವ ಇಂಡಿಯನ್ ಸ್ಕೂಲ್ ಆಫ್ ಎಕ್ಸಲೆನ್ಸ್ ಸರ್ವೆ ನಂ. 91, 1, & 919 ಹೊರಮಾವು ಹೊಯ್ಸಳನಗರ ಕೆ.ಆರ್. ಪುರಂ ಹೋಬಳಿ ಬೆಂಗಳೂರು ಈಸ್ಟ್ ತಾಲ್ಲೂಕು ಬೆಂಗಳೂರು-560016 ಶಾಲೆಯ ಹೆಸರನ್ನು **"ಆರ್ಕಿಡ್ಸ್ ದಿ ಇಂಟರ್ ನ್ಯಾಷನಲ್ ಸ್ಕೂಲ್"** ಎಂದು ಬದಲಾವಣೆ ಮಾಡಲು ಅನುಮತಿ ಕೋರಿರುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಜ್ಞಾಪನ ಸಂಖ್ಯೆ:ಇಡಿ 28 ಪಿಜಿಸಿ 99 ದಿನಾಂಕ:27/12/1999.
2. ಸರ್ಕಾರದ ಆದೇಶದ ಸಂಖ್ಯೆ ಇಪಿ 26 ಪಿಜಿಸಿ 2024 ದಿನಾಂಕ:- 17-02-2024.
3. ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ಇಪಿ46ಪಿಜಿಸಿ2023 ದಿನಾಂಕ:07/02/2023.
4. ಮಾನ್ಯ ಆಯುಕ್ತರು ಶಾಲಾ ಶಿಕ್ಷಣ ಇಲಾಖೆ, ಇವರ ಪತ್ರ ಸಂಖ್ಯೆ:ಇ-1035161 ಡಿಪಿಐ-ಸಿಪಿಐ.ಸಿ7-2(ಯುಎಸ್‌ಎಂ)/3/2023 ದಿನಾಂಕ:16/03/2023.
5. ಕ್ಷೇತ್ರ ಶಿಕ್ಷಣಾಧಿಕಾರಿಗಳು ಬೆಂಗಳೂರು ದಕ್ಷಿಣ ವಲಯ-04 ರವರ ಪತ್ರದ ಸಂಖ್ಯೆ ಸಿ5 ಖಾ ಶಾ ಹೆ ಬದಲಾವಣೆ 02/2026-27 ದಿನಾಂಕ;- 13-04-2026.

.* * * * * *

### ಪ್ರಸ್ತಾವನೆ :-

M A R K ಎಜುಕೇಷನಲ್ ಅಂಡ್ ಕಲ್ಚರಲ್ ಟ್ರಸ್ಟ್ ಈ ಆಡಳಿತ ಮಂಡಳಿಯ ವತಿಯಿಂದ ನಡೆಸುತ್ತಿರುವ ಇಂಡಿಯನ್ ಸ್ಕೂಲ್ ಆಫ್ ಎಕ್ಸಲೆನ್ಸ್ ಸರ್ವೆ ನಂ. 91, 1, & 919 ಹೊರಮಾವು ಹೊಯ್ಸಳನಗರ ಕೆ.ಆರ್. ಪುರಂ ಹೋಬಳಿ ಬೆಂಗಳೂರು ಈಸ್ಟ್ ತಾಲ್ಲೂಕು ಬೆಂಗಳೂರು-560016 ಶಾಲೆಯ ಹೆಸರನ್ನು **"ಆರ್ಕಿಡ್ಸ್ ದಿ ಇಂಟರ್ ನ್ಯಾಷನಲ್ ಸ್ಕೂಲ್"** ಎಂದು ಬದಲಾವಣೆ ಮಾಡಲು ಅನುಮತಿ ನೀಡುವ ಕುರಿತು ಕ್ಷೇತ್ರ ಶಿಕ್ಷಣಾಧಿಕಾರಿಗಳು, ದಕ್ಷಿಣ ವಲಯ-4 ರವರು ಉಲ್ಲೇಖಿತ(5)ರಲ್ಲಿ ಸಲ್ಲಿಸಿರುವ ಪ್ರಸ್ತಾವನೆಯಲ್ಲಿನ ಶಿಫಾರಸ್ಸಿನಂತೆ ಪರಿಗಣಿಸಿ ಕೆಳಕಂಡಂತೆ ಆದೇಶಿಸಲಾಗಿದೆ.

### ಆದೇಶ:-

M A R K ಎಜುಕೇಷನಲ್ ಅಂಡ್ ಕಲ್ಚರಲ್ ಟ್ರಸ್ಟ್ ಈ ಆಡಳಿತ ಮಂಡಳಿಯ ವತಿಯಿಂದ ನಡೆಸುತ್ತಿರುವ ಇಂಡಿಯನ್ ಸ್ಕೂಲ್ ಆಫ್ ಎಕ್ಸಲೆನ್ಸ್ ಸರ್ವೆ ನಂ. 91, 1, & 919 ಹೊರಮಾವು ಹೊಯ್ಸಳನಗರ ಕೆ.ಆರ್. ಪುರಂ ಹೋಬಳಿ ಬೆಂಗಳೂರು ಈಸ್ಟ್ ತಾಲ್ಲೂಕು ಬೆಂಗಳೂರು-560016 ಶಾಲೆಯ ಹೆಸರನ್ನು **"ಆರ್ಕಿಡ್ಸ್ ದಿ ಇಂಟರ್ ನ್ಯಾಷನಲ್ ಸ್ಕೂಲ್"**ಎಂದು ಬದಲಾವಣೆ ಮಾಡಲು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅನುಮತಿ ನೀಡಿದೆ.

ಷರತ್ತುಗಳು:-

1. ಶಾಲೆಯ ದಾಖಲೆಗಳಲ್ಲಿ ಶಾಲೆಯ ಹೆಸರನ್ನು ತಿದ್ದುಪಡಿ ಮಾಡಿದ ನಂತರ ಶಾಲೆಯ ಹೆಸರನ್ನು ಬದಲಾವಣೆ ಮಾಡುವುದು.
2. ಈ ಆದೇಶ ಜಾರಿಯಾದ ತಕ್ಷಣವೇ ಶಾಲೆಯ ಹಳೆಯ ಹೆಸರನ್ನು ಅದರ ವಿಳಾಸದೊಂದಿಗೆ ರದ್ದುಪಡಿಸತಕ್ಕದ್ದು.
3. ಉಲ್ಲೇಖ(1) ಸರ್ಕಾರದ ಆದೇಶದಂತೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಾಲೆಯ ಬದಲಾದ ಹೆಸರು ಹಾಗೂ ವಿಳಾಸದ ಬಗ್ಗೆ ಮತ್ತು ಬದಲಾದ ಹೆಸರಿನ ಶಾಲೆಯ ಆಡಳಿತ ಮಂಡಳಿಯು ಕರ್ನಾಟಕ ಸೊಸೈಟೀಸ್ ರಿಜಿಸ್ಟ್ರೇಷನ್ ಸಂಖ್ಯೆ, ವಿಳಾಸ, ಕರ್ನಾಟಕ ಶಿಕ್ಷಣ ಕಾಯ್ದೆಯಡಿಯಲ್ಲಿನ ರಿಜಿಸ್ಟ್ರೇಷನ್ ಸಂಖ್ಯೆ, ಸದಸ್ಯರುಗಳ ಹೆಸರು ಈ ವಿವರಣೆಗಳನ್ನು ಒಳಗೊಂಡ ಆದೇಶವನ್ನು ಹೊರಡಿಸತಕ್ಕದ್ದು.
4. ಆಡಳಿತದ ದೃಷ್ಟಿಯಿಂದ ಶಾಲೆಯ ಹೆಸರನ್ನು ಒಂದು ಬಾರಿ ಮಾತ್ರ ಬದಲಾಯಿಸತಕ್ಕದ್ದು ಮತ್ತೊಮ್ಮೆ ಬದಲಾವಣೆಗೆ ಪ್ರಸ್ತಾವನೆ ಸಲ್ಲಿಸಿದಲ್ಲಿ ಅದನ್ನು ಪರಿಗಣಿಸತಕ್ಕದ್ದಲ್ಲ.
5. ಹಳೇ ಶಾಲೆಯ ಹೆಸರಿನಲ್ಲಿ ಯಾವುದೇ ಕಾರಣಕ್ಕೂ ಆಡಳಿತ ಮಂಡಳಿಯವರು ಶಾಲೆಯನ್ನು ನಡೆಸಬಾರದು.
6. ಕಛೇರಿಯ ವ್ಯವಹಾರಗಳಿಗೆ ಶಾಲೆಯ ಹೆಸರು ಬದಲಾಯಿಸಿದ ದಿನಾಂಕದಿಂದ ಹೊಸ ನಾಮಕರಣ ಮಾಡಿರುವ ಹೆಸರು ಚಾಲ್ತಿಯಲ್ಲಿರುತ್ತದೆ.
7. ಹೊಸ ಹೆಸರಿನಲ್ಲಿ ಶಾಲೆ ನಡೆಸುತ್ತಿರುವ ಬಗ್ಗೆ ಬದಲಾವಣೆ ಜಾರಿಗೆ ಬಂದ ತಕ್ಷಣ ಕ್ಷೇತ್ರ ಶಿಕ್ಷಣಾಧಿಕಾರಿಗಳು ರವರು ಈ ಕಛೇರಿಗೆ ಲಿಖಿತವಾಗಿ ತಿಳಿಸತಕ್ಕದ್ದು.
8. ಹೆಸರು ಬದಲಾವಣೆ ಬಗ್ಗೆ ಸ್ಥಳೀಯ ಪತ್ರಿಕೆಗಳಲ್ಲಿ ಸಾರ್ವಜನಿಕರ ಗಮನಕ್ಕೆ ತರಲು ಆಡಳಿತ ಮಂಡಳಿಗೆ ಸೂಚಿಸಿ ಅದೇ ಪ್ರಕಟಣೆಯಲ್ಲಿ ಹಿಂದಿನ ಹೆಸರಿನ ಶಾಲೆಯ ಹೆಸರು ಬದಲಾವಣೆ ಆಗಿರುವ ಬಗ್ಗೆ ಸಾರ್ವಜನಿಕರಿಗೆ ತಿಳಿಯಪಡಿಸುವುದು.
9. ಆಡಳಿತ ಮಂಡಳಿಯವರು ಬದಲಾವಣೆಯಾದ ಶಾಲೆಯ ಹೆಸರಿಗೆ ಅಫಿಲಿಯೇಷನ್ ನವೀಕರಿಸಿಕೊಳ್ಳತಕ್ಕದ್ದು.
10. ಆನ್‌ಲೈನ್ ಮತ್ತು ಎಸ್.ಎ.ಟಿ.ಎಸ್ ನಲ್ಲಿ ಶಾಲೆಯ ಹೆಸರನ್ನು ಬದಲಾವಣೆ ಮಾಡಿಕೊಳ್ಳುವುದು.
11. ಸಕ್ಷಮ ಪ್ರಾಧಿಕಾರದಿಂದ ನಿರಾಕ್ಷೇಪಣಾ ಪತ್ರದಲ್ಲಿಯೂ ಸಹ ಶಾಲೆಯ ಹೆಸರನ್ನು ತಿದ್ದುಪಡಿ ಮಾಡಿಸಿಕೊಳ್ಳತಕ್ಕದ್ದು.
12. ಐಸಿಎಸ್.ಇ/ಸಿಬಿಎಸ್‌ಇ. ಗೆ ಅಫಿಲಿಯೇಷನ್ ಪಡೆದಿರುವ ಮಂಡಳಿಯಿಂದಲೂ ಸಹ ಶಾಲೆಯ ಹೆಸರನ್ನು ತಿದ್ದುಪಡಿ ಮಾಡಿಸಿಕೊಳ್ಳತಕ್ಕದ್ದು.

(ವಿವೇಕಾನಂದ ಎಂ)
ಉಪನಿರ್ದೇಶಕರು(ಆಡಳಿತ)
ಬೆಂಗಳೂರು ದಕ್ಷಿಣ ಜಿಲ್ಲೆ.

ಗೆ,
ಕ್ಷೇತ್ರ ಶಿಕ್ಷಣಾಧಿಕಾರಿಗಳು ಬೆಂಗಳೂರು ದಕ್ಷಿಣ ವಲಯ-04, ಕೆ.ಆರ್ ಪುರಂ, ಬೆಂಗಳೂರು-560 036.
ರವರಿಗೆ ಅಗತ್ಯ ಕ್ರಮಕ್ಕಾಗಿ.

ಪ್ರತಿಯನ್ನು:-

1. ಕಾರ್ಯದರ್ಶಿಗಳು, M A R K ಎಜುಕೇಷನಲ್ ಅಂಡ್ ಕಲ್ಚರಲ್ ಟ್ರಸ್ಟ್ ಸರ್ವೆ ನಂ. 91, 1, & 919 ಹೊರಮಾವು ಹೊಯ್ಸಳನಗರ ಕೆ.ಆರ್. ಪುರಂ ಹೋಬಳಿ ಬೆಂಗಳೂರು ಈಸ್ಟ್ ತಾಲ್ಲೂಕು ಬೆಂಗಳೂರು-560016
2. ಕಛೇರಿ ಪ್ರತಿ

LOGO

GOVERNMENT OF KARNATAKA

BENGALURU CITY JILLA PANCHAYAT

OFFICE OF THE DEPUTY DIRECTOR, DEPARTMENT OF SCHOOL EDUCATION, BENGALURU SOUTH DISTRICT, KALASIPALYA, BENGALURU – 02.

No.AR-4(a8) P.S.N.C 02/2026-27 Date: 23-04-2026

-: Reminder :-

**Sub:** Regarding the request for permission to change the name of **Indian School of Excellence,** 91/1 and 91/9, Horamavu, Hoysala Nagar, K. R. Puram Hobli, Bangalore – 560016 run by the **M.A.R.K. Educational and Cultural Trust** to **Orchids The International School** by this Board of Directors.

**Ref:** 1. Government Order No.EP 28 PGC 99 Dated 27-12-1999
2. Government Order No.EP 26 PGC 2024 Dated 17-02-2024
3. Government official reminder No.EP 46 PGC 2023 Dated 07-02-2023
4. Letter No.E-1035161DPI-CPI-C7-2 (USM)/3/2023 dated 16-03-2023 issued by the Commissioner, School Education Department, Bengaluru.
5. Letter No.C5/PSNC 02/2026-27 dated 13-04-2026 by the Block Education Officer, South Region-04.

**Proposal;-**

It is hereby ordered as per the recommendation in the proposal submitted by the Block Education Officers, South Zone 4 in reference (5) regarding the permission to change the name of the **Indian School of Excellence,** 91/1 and 91/9, Horamavu, Hoysala Nagar, K. R. Puram Hobli, Bangalore – 560016 run by **M.A.R.K. Educational and Cultural Trust** to **Orchids The International School.**

**Order;-**

The **M.A.R.K. Educational and Cultural Trust** has granted permission to change the name of the **Indian School of Excellence,** 91/1 and 91/9, Horamavu, Hoysala Nagar, K. R. Puram Hobli, Bangalore – 560016 run by this Board of Directors to **Orchids The International School,** subject to the following conditions:

**CONDITIONS:**

1. The school name should be changed after making necessary changes in the school records.

NOTARY
CHANDRAKALA M.A., LL.B., Bengaluru
Throughout Bengaluru Metropolitan Area
Regd. No. 1259
Term Expiry Date: 23.01.2032
GOVT. OF INDIA

2. The old name of the school along with its address shall be amended immediately after the execution of this order.
3. As per Government order mentioned in reference No.1, the management of the school should inform the Karnataka Societies registration about change of school name and address of the name changed school.
4. From the administrative point of view, the name of the school should be changed only once and it is not allowed to change it again.
5. The management should not run the school under the name of the old school for any reason.
6. For all official purposes the renewed name will be used with effect from the date of change of school name.
7. The office of the Block Education Officer should be informed in writing as soon as the change takes effect regarding the running of the school under a new name.
8. The management should be advised to issue a newspaper advertisement in the local newspaper regarding change of school name. In the same advertisement it should also be mentioned that the old school name has changed to the new school name.
9. The governing body should renew the affiliation for the changed school name.
10. Taking action to change the name of the school online and in STS.
11. The name of the school should also be amended with a no objection letter from the competent authority.
12. The name of the school can should be amended by the board affiliated to ICSC/CBSE.

(Vivekananda M)
Deputy Director (Admin)
Bangalore South District

To:

Block Education Officer, Bangalore South Zone – 04, K R Pura, Bengaluru – 560 036 for necessary action.

CC: 1. M.A.R.K. Educational and Cultural Trust, 91/1 and 91/9, Horamavu, Hoysala Nagar, K. R. Puram Hobli, Bangalore – 560016.
2. Office Copy

ATTESTED BY ME

CHANDRAKALA, M.A., LLB.,
ADVOCATE & NOTARY PUBLIC
GOVT OF INDIA
# 293, 5th Cross, Indiranagar, Rajajinagar,
WOC Road, BENGALURU-560 010

NOTARY
CHANDRAKALA M.A., LLB.,
Throughout Bengaluru Metropolitan Area
Regd. No. 12598
Term Expiry Date: 23.01.2032
GOVT. OF INDIA

TRANSLATOR SIGN

**ಕರ್ನಾಟಕ ಸರ್ಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆ**

**ಉಪನಿರ್ದೇಶಕರ ಕಛೇರಿ , ಸಾರ್ವಜನಿಕ ಶಿಕ್ಷಣ ಇಲಾಖೆ,BENGALURU SOUTH ಜಿಲ್ಲೆ**

# ಪ್ರಥಮ ಮಾನ್ಯತೆ ಪ್ರಮಾಣ ಪತ್ರ

**ಸಂಖ್ಯೆ :** 100896 **ದಿನಾಂಕ :** 04-Apr-2026

**ವಿಷಯ :** ಮಕ್ಕಳ ಹಕ್ಕುಗಳ ಶಿಕ್ಷಣ ಕಾಯ್ದೆ 2009 ಮತ್ತು ಕರ್ನಾಟಕ ಶಿಕ್ಷಣ ಕಾಯ್ದೆ 1983 ಯೊಳಗೆ ರಚಿತವಾಗಿರುವ ನಿಯಮಗಳನ್ವಯ ಶಾಲಾ ಮಾನ್ಯತೆಯನ್ನು ನೀಡುವ ಬಗ್ಗೆ.

&&&&

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ **M A R K EDUCATIONAL AND CULTURAL TRUST** ಆಡಳಿತ ಮಂಡಳಿಯು **29204101608** ಡೈಸ್ ಕೋಡ್ ಸಂಖ್ಯೆ **INDIAN SCHOOL OF EXCELLENCE , SY NO 91 1 AND 91 9 HORAMAVU HOYSALA NAGAR K R PURAM HOBLI BAGALORE EAST** ಶಾಲೆಗೆ [ವಿಳಾಸ], **1_8** ತರಗತಿವರೆಗೆ **English** ಮಾಧ್ಯಮಕ್ಕೆ ಶಾಲಾ ಪ್ರಥಮ ಮಾನ್ಯತೆಯನ್ನು ನವೀಕರಿಸಲು ಆನ್ಲೈನ್ನಲ್ಲಿ ಸಲ್ಲಿಸಿದ್ದ ಅರ್ಜಿಯಲ್ಲಿನ ದಾಖಲೆಗಳನ್ನು ಇಲಾಖೆಯ ಅಧಿಕಾರಿಗಳು ಪರಿಶೀಲಿಸಿ, ಈ ಕೆಳಕಂಡಂತೆ ಪ್ರಥಮ ಮಾನ್ಯತೆಯನ್ನು ನೀಡಿದೆ.

| ಕ್ರ.ಸಂ. | ವಿವರ | ಆನ್ಲೈನ್ ಅರ್ಜಿ ಸಂಖ್ಯೆ : 100896 |
|---|---|---|
| 1 | ಆಡಳಿತ ಮಂಡಳಿಯ ಹೆಸರು ಮತ್ತು ವಿಳಾಸ | **M A R K EDUCATIONAL AND CULTURAL TRUST** |
| 2 | ಶಾಲೆಯ ಹೆಸರು ಮತ್ತು ವಿಳಾಸ | **INDIAN SCHOOL OF EXCELLENCE , SY NO 91 1 AND 91 9 HORAMAVU HOYSALA NAGAR K R PURAM HOBLI BAGALORE EAST** |
| 3 | ಡೈಸ್ ಕೋಡ್ ಸಂಖ್ಯೆ: | **29204101608** |
| 4 | ತರಗತಿ | **1 to 8** |
| 5 | ಮಾಧ್ಯಮ | **English** |
| 6 | ವಿಭಾಗ | **8** |
| 7 | ಶಾಲಾ ವಿಧ | **Pvt. Unaided /First Recognition** |
| 8 | ಪ್ರಥಮ ಮಾನ್ಯತೆ ವರ್ಷ | **2025 2026 ಸಾಲಿನಿಂದ 2025 2026 ರವರೆಗೆ** |

ಷರತ್ತುಗಳು:

1. ಮಕ್ಕಳ ಹಕ್ಕುಗಳ ಶಿಕ್ಷಣ ಕಾಯ್ದೆ 2009, ಮತ್ತು ಕರ್ನಾಟಕ ಶಿಕ್ಷಣ ಕಾಯ್ದೆ 1983ರ ಅಡಿಯಲ್ಲಿ ಹಾಗೂ ಅದರ ಅಡಿಯಲ್ಲಿ ರಚಿತವಾದ ನಿಯಮಗಳ ಅನುಸಾರ ಶಾಲೆಯನ್ನು ನೋಂದಾಯಿಸಿ, ನೋಂದಾಯಿಸಿದ ತರಗತಿವರೆಗೆ ಮಾನ್ಯತೆಯನ್ನು ನವೀಕರಿಸಲಾಗಿದೆ. ಈ ತರಗತಿಗಳ ಹೊರತಾಗಿ ಹೆಚ್ಚುವರಿ ತರಗತಿಗಳನ್ನು ಮತ್ತು ಹೆಚ್ಚುವರಿ ವಿಭಾಗಗಳನ್ನು ನಡೆಸಲು ಅನುಮತಿ ಇರುವುದಿಲ್ಲ.

2. ಶಾಲೆಯು ಕರ್ನಾಟಕ ಶಿಕ್ಷಣ ಕಾಯ್ದೆ 1983 ಮತ್ತು ಮಕ್ಕಳ ಹಕ್ಕುಗಳ ಶಿಕ್ಷಣ ಕಾಯ್ದೆ 2009 ಅದರಡಿಯಲ್ಲಿ ರಚಿತವಾದ ನಿಯಮಗಳ ಅಡಿಯಲ್ಲಿ ಕಾರ್ಯನಿರ್ವಹಿಸುವುದು.

3. ಮಕ್ಕಳ ಹಕ್ಕುಗಳ ಶಿಕ್ಷಣ ಕಾಯ್ದೆ 2009 ಅದರಡಿಯಲ್ಲಿ ರಚಿತವಾದ ನಿಯಮಗಳ ಅಡಿಯಲ್ಲಿ ಶೇಕಡಾ 25%ರಷ್ಟು ಸೀಟುಗಳನ್ನು ದುರ್ಬಲ ವರ್ಗದ ಮಕ್ಕಳಿಗೆ ಮೀಸಲಿಡುವುದು. ಆರ್.ಟಿ.ಇ ವ್ಯಾಪ್ತಿಗೆ ಒಳಪಡುವ ಶಾಲೆಗಳಿಗೆ ಸರ್ಕಾರವು ಮೀಸಲಿಟ್ಟ ಸೀಟುಗಳನ್ನು ಆರ್.ಟಿ.ಇ ಅಡಿಯಲ್ಲಿ ದಾಖಲಿಸಲು ಅಧಿಕಾರ ಹೊಂದಿರುತ್ತದೆ. [ಸರ್ಕಾರವು ಮಕ್ಕಳ ಪೋಷಕರು ವಾಸಿಸುವ ಅಕ್ಕ ಪಕ್ಕದ ಶಾಲೆಗಳಲ್ಲಿ ದಾಖಲಿಸಲು ಅನುಕೂಲವಾಗುವಂತೆ ನಿಯಮಗಳನ್ನು ರೂಪಿಸಿದ್ದು, ಅದರಂತೆ ಸರ್ಕಾರಿ, ಸರ್ಕಾರದಿಂದ ಅನುದಾನ ಪಡೆದ ಶಿಕ್ಷಣ ಸಂಸ್ಥೆಗಳು ಇದ್ದಲ್ಲಿ ಆ ಶಾಲೆಗೆ ಮಕ್ಕಳನ್ನು ದಾಖಲಿಸಲಾಗುವುದು] ಇಲ್ಲದಿದ್ದ ಪಕ್ಷದಲ್ಲಿ ಖಾಸಗಿ ಶಾಲೆಗಳು ಸರ್ಕಾರದಿಂದ ದಾಖಲಿಸುವ ಮಕ್ಕಳನ್ನು ದಾಖಲಿಸಿಕೊಂಡು ಪ್ರಾಥಮಿಕ ಹಂತದವರೆಗೆ ವಿದ್ಯಾಭ್ಯಾಸ ಮುಂದುವರೆಸಲು ಅವಕಾಶ ನೀಡುವುದು. ಈ ಮಕ್ಕಳನ್ನು ಯಾವುದೇ ತಾರತಮ್ಯವಿಲ್ಲದೆ ವ್ಯಾಸಂಗ ಮುಂದುವರೆಸಲು ಅವಕಾಶ ಕಲ್ಪಿಸುವುದು.

4. ಕಂಡಿಕೆ:3ರಲ್ಲಿ ವಿವರಿಸಿರುವಂತೆ ಆರ್.ಟಿ.ಇ ನಿಯಮದಡಿ ದಾಖಲಾದ ಮಕ್ಕಳ ಶುಲ್ಕಗಳನ್ನು ನಿಯಮಾನುಸಾರ ಸರ್ಕಾರವು ಬಿಡುಗಡೆ ಮಾಡುತ್ತದೆ. ಆದ್ದರಿಂದ ಈ ಮಕ್ಕಳಿಂದ ಯಾವುದೇ ಶುಲ್ಕವನ್ನು ವಸೂಲು ಮಾಡುವುದನ್ನು ನಿರ್ಬಂಧಿಸಿದೆ.

5. ಶಾಲೆ ಮತ್ತು ಶಾಲೆಯ ಆಡಳಿತ ಮಂಡಳಿಯು ಯಾವುದೇ ತರವಾದ ಕ್ಯಾಪಿಟೇಷನ್ ಶುಲ್ಕವನ್ನು ಮತ್ತು ಸ್ವಇಚ್ಛೆಯಿಂದ ನೀಡುವ ಡೊನೇಷನ್ಗಳನ್ನು ಪೋಷಕರಿಂದ ದಾಖಲಾತಿ ಸಮಯದಲ್ಲಾಗಲೀ ಅಥವಾ ನಂತರದಲ್ಲಾಗಲೀ ಯಾವುದೇ ರೀತಿಯಾಗಿ ವಸೂಲು ಮಾಡುವುದನ್ನು ನಿರ್ಬಂದಿಸಿದೆ.

6. ಶಾಲೆಯು / ಆಡಳಿತ ಮಂಡಳಿಯು ತಮ್ಮ ಶಾಲೆಯಲ್ಲಿ ಮಕ್ಕಳ ಪೋಷಕರಿಂದ ವ್ಯಾಸಂಗ ಶುಲ್ಕವಾಗಿ ವಸೂಲು ಮಾಡುವ ಶುಲ್ಕದ ಮಾಹಿತಿಯನ್ನು ರಾಜ್ಯ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ:31:ಪಿಜಿಸಿ:2019, ದಿನಾಂಕ:27.07.2019ರನ್ವಯ ಮಾಹಿತಿಗಾಳನ್ನು ಇಲಾಖಾ ವೆಬ್ಸೈಟ್ನಲ್ಲಿ ಹಾಗೂ ಶಾಲಾ ಸೂಚನಾ ಫಲಕದಲ್ಲಿ ಪ್ರಕಟಿಸುವುದು. ನಿಗದಿತ ಶುಲ್ಕಕ್ಕಿಂತ ಹೆಚ್ಚುವರಿ ಶುಲ್ಕವನ್ನು ವಸೂಲು ಮಾಡತಕ್ಕದ್ದಲ್ಲ.

7. ಶಾಲೆಯು / ಆಡಳಿತ ಮಂಡಳಿಯು ವಿದ್ಯಾರ್ಥಿಗಳನ್ನು ಸರ್ಕಾರವು ನಿಗದಿಪಡಿಸಿದೆ ಅವಧಿಯಲ್ಲಿಯೇ ದಾಖಲಾತಿ ಮಾಡಿಕೊಳ್ಳುವುದು.

8. ಶಾಲೆಯು / ಆಡಳಿತ ಮಂಡಳಿಯು ಈ ಕೆಳಕಂಡ ಅಂಶಗಳ ವಿರುದ್ಧ ದಾಖಲಾತಿಯನ್ನು ನಿರಾಕರಿಸುವಂತಿಲ್ಲ.

(i) ವಯಸ್ಸಿನ ಪುರಾವೆ ಕೊರತೆಯಿಂದಾಗಿ.

(ii) ಜಾತಿ, ಧರ್ಮ, ಹುಟ್ಟಿದ ಸ್ಥಳ, ಭಾಷೆಯ ಆಧಾರದ ಮೇಲೆ.

(iii) ಪ್ರವೇಶದ ವಿಸ್ತøತ ಅವಧಿಯ ನಂತರ ಪ್ರವೇಶವನ್ನು ಕೋರಿದರೆ.

9. ಆರ್.ಟಿ.ಇ ಕಾಯ್ದೆ ಮತ್ತು ನಿಯಮಗಳು, ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ನಿಯಮಗಳ ಪ್ರಕಾರ ಎಲ್ಲಾ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವುದು. [ಸಂಬಂಧಿಸಿದ ಪ್ರಾಧಿಕಾರಗಳಿಂದ ಅಗ್ನಿ ಸುರಕ್ಷತೆ ಮತ್ತು ಕಟ್ಟಡ ಸುರಕ್ಷತಾ ಪ್ರಮಾಣ ಪತ್ರ ಹಾಗೂ K.S.C.P.C.R ಮತ್ತು N.C.P.C.R ಪ್ರಕಾರ ಮಕ್ಕಳ ಕಲಿಕೆಯ ಸುರಕ್ಷತೆ].

10. ಶಾಲೆಯು / ಆಡಳಿತ ಮಂಡಳಿಯು ಈ ಕೆಳಕಂಡಂತೆ

(i) ಪ್ರವೇಶ ಪಡೆದ ಯಾವುದೇ ಮಗುವನ್ನು ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಮಾಧ್ಯಮ ಶಿಕ್ಷಣವನ್ನು ಪೂರ್ಣಗೊಳಿಸುವವರೆಗೆ ಯಾವುದೇ ತರಗತಿಯಲ್ಲಿ ಹಿಡಿದಿಟ್ಟುಕೊಳ್ಳಬಾರದು ಅಥವಾ ಶಾಲೆಯಿಂದ ಹೊರಹಾಕಬಾರದು.

(ii) ಯಾವುದೇ ಮಗುವನ್ನು ದೈಹಿಕ ಅಥವಾ ಮಾನಸಿಕವಾಗಿ ಕಿರುಕುಳಕ್ಕೆ ಒಳಪಡಿಸಬಾರದು.

(iii) ಪ್ರಾಥಮಿಕ ಶಿಕ್ಷಣ ಪೂರ್ಣಗೊಳ್ಳುವವರೆಗೆ ಯಾವುದೇ ಮಗು ಯಾವುದೇ ಬೋರ್ಡ್ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ಅಗತ್ಯವಿಲ್ಲ.

(iv) ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸುವ ಪ್ರತಿ ಮಗುವಿಗೆ ಆರ್.ಟಿ.ಇ ನಿಯಮ 21 ಮತ್ತು ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ನಿಯಮಗಳಡಿಯಲ್ಲಿ ನಿಗದಿಪಡಿಸಿದಂತೆ ಪ್ರಮಾಣ ಪತ್ರವನ್ನು ನೀಡಲಾಗುತ್ತದೆ.

(v) ಆರ್.ಟಿ.ಇ ಕಾಯ್ದೆ ಮತ್ತು ನಿಯಮಗಳು ಹಾಗೂ ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ನಿಯಮಗಳ ನಿಬಂಧನೆಗಳ ಪ್ರಕಾರ ಶಾಲೆಯು ವಿಶೇಷ ಅಗತ್ಯತೆಗಳು / ವಿಶೇಷ ಮಕ್ಕಳನ್ನು ಹೊಂದಿರುವ ಮಕ್ಕಳನ್ನು ಸಹ ಸೇರಿಸಿಕೊಳ್ಳಬೇಕು.

(vi) ನೇಮಕಗೊಂಡ ಶಿಕ್ಷಕರು ಆರ್.ಟಿ.ಇ ಕಾಯ್ದೆ ಮತ್ತು ನಿಯಮಗಳು ಹಾಗೂ ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ನಿಯಮಗಳ ಹಾಗೂ ಸರ್ಕಾರಿ ಆದೇಶಗಳಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರಿಗೆ ನಿಗದಿಪಡಿಸಿದಂತೆ ಕನಿಷ್ಠ ವಿದ್ಯಾರ್ಹತೆಗಳನ್ನು ಹೊಂದಿರತಕ್ಕದ್ದು.

(vii) ಶಿಕ್ಷಕರಿಗೆ ಪಾವತಿಸಬೇಕಾದ ವೇತನ ಮತ್ತು ಭತ್ಯೆಗಳು ಹಾಗೂ ಸೇವಾ ನಿಯಮಗಳು ಮತ್ತು ಷರತ್ತುಗಳು ರಾಜ್ಯ ಸರ್ಕಾರವು ಸೂಚಿಸಿದಂತೆ ಇರುತ್ತದೆ. ಮತ್ತು ಸರ್ಕಾರಿ ಅಧಿಸೂಚನೆ [ಭವಿಷ್ಯ ನಿಧಿ (Pಈ)] ಮತ್ತು ಪಾವತಿಸಬೇಕಾದ ಬ್ಯಾಂಕ್ ಮತ್ತು ಇತರೆ ವೇತನಗಳ ಮೂಲಕ ಶಿಕ್ಷಕರಿಗೆ ವೇತನವನ್ನು ಪಾವತಿಸಲಾಗುತ್ತದೆ. ಮತ್ತು ಉದ್ಯೋಗಿ ರಾಜ್ಯ ವಿಮೆಗೆ (ಇSI) ಒಳಪಡಿಸುತ್ತದೆ.

(viii) ಶಿಕ್ಷಕರು ಕಾಯ್ದೆ ಸೆಕ್ಷನ್ 24[1] ಮತ್ತು ಆರ್.ಟಿ.ಇ ಕಾಯ್ದೆ ಮತ್ತು ನಿಯಮಗಳು ಹಾಗೂ ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ನಿಯಮಗಳ ನಿಯಮ 17ರ ಅಡಿಯಲ್ಲಿ ಸೂಚಿಸಲಾದ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ ಮತ್ತು ಮೇಲ್ವಿಚಾರಣೆ ಪರಿಗಣನೆಗಳಿಗಾಗಿ ಖಾಸಗಿ ಟ್ಯೂಷನ್ಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದಿಲ್ಲ.

11. ಶಾಲೆಯು ಸಂಯೋಜಿತವಾಗಿರುವ ಶೈಕ್ಷಣಿಕ ರಾಜ್ಯ ಪಠ್ಯಕ್ರಮ ಮತ್ತು ರಾಜ್ಯ ಪಠ್ಯ ಪುಸ್ತಕಗಳನ್ನು ಅನುಸರಿಸುವುದು.

12. ಕರ್ನಾಟಕ ಶಿಕ್ಷಣ ಕಾಯ್ದೆ ಸೆಕ್ಷನ್ 19ರಲ್ಲಿ ನಿರ್ದಿಷ್ಟಪಡಿಸಿದಂತೆ ಶಾಲೆಯು ನಿಯಮಗಳು ಮತ್ತು ಮಾನದಂಡಗಳನ್ನು ನಿರ್ವಹಿಸುವುದು. ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ನಿಯಮಗಳಲ್ಲಿ ಸೂಚಿಸಿರುವಂತೆ ಇಲಾಖಾ ಸಿಬ್ಬಂದಿಗಳನ್ನು ನೇಮಿಸುವುದು.

13. ಶಾಲೆಗೆ ಸಂಬಂಧಿಸಿದ ಶಾಲಾ ಕಟ್ಟಡಗಳು ಮತ್ತು ಇತರೆ ಮೂಲಭೂತ ಸೌಕರ್ಯಗಳನ್ನು ಹಗಲು ಅಥವಾ ರಾತ್ರಿಯಲ್ಲಿ ಯಾವುದೇ ವಾಣಿಜ್ಯ ಚಟುವಟಿಕೆಗಳಿಗೆ ಅಥವಾ ರಾಜಕೀಯ ಮತ್ತು ಶೈಕ್ಷಣಿಕೇತರ ಚಟುವಟಿಕೆಗಳಿಗೆ ನೀಡಬಾರದು.

14. ಶಾಲೆಯನ್ನು ಯಾವುದೇ ವ್ಯಕ್ತಿ ಅಥವಾ ಗುಂಪು ಅಥವಾ ಸಂಘದ ಲಾಭಕ್ಕಾಗಿ ನಡೆಸಬಾರದು.

15. ಶಾಲೆಯನ್ನು ಚಾರ್ಟೆಡ್ ಅಕೌಂಟೆಂಟ್ನಿಂದ ಆಡಿಟ್ ಮಾಡಿಸಿ, ಪ್ರತಿಯನ್ನು ಪ್ರತಿ ವರ್ಷ ಜೂನ್ ಅಂತ್ಯದೊಳಗೆ ಉಪನಿರ್ದೇಶಕರು / ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸುವುದು.

16. ಸರ್ಕಾರಿ ಅಧಿಸೂಚನೆಯ [ಕನ್ನಡ ಭಾಷಾ ನೀತಿ 2016] ಪ್ರಕಾರ ಶಾಲೆಯು ಭಾಷಾ ನೀತಿಯನ್ನು ಅನುಸರಿಸುವುದು.

17. ಆರ್.ಟಿ.ಇ ಕಾಯ್ದೆ ಮತ್ತು ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ನಿಯಮಗಳ ಪ್ರಕಾರ ಆಡಳಿತ ಮಂಡಳಿ ಮತ್ತು ಶಿಕ್ಷಕರುಗಳು ಕಾರ್ಯನಿರ್ವಹಿಸುವುದು.

18. ಶಾಲೆ / ಆಡಳಿತ ಮಂಡಳಿಯು ಸರ್ಕಾರ ಮತ್ತು ಇಲಾಖೆಯ ನಿಯಮ ಮತ್ತು ನಿರ್ದೇಶನವನ್ನ ತಪ್ಪದೇ ಪಾಲಿಸುವುದು.

19. ಪ್ರತಿ ವರ್ಷದ ಮಾರ್ಚ್ ಅಂತ್ಯದ ಒಳಗಾಗಿ ಎಸ್.ಎ.ಟಿ.ಎಸ್ನಲ್ಲಿ ಶಾಲಾ ಮಾಹಿತಿಯನ್ನು ನಿಯಮನುಸಾರ ಅಪ್ಡೇಟ್ ಮಾಡುವುದನ್ನು ಕಡ್ಡಾಯಗೊಳಿಸಿದೆ.

20. ಮೇಲಿನ ಷರತ್ತುಗಳನ್ನು ಉಲ್ಲಂಘಿಸಿದ್ದಲ್ಲಿ ಆರ್.ಟಿ.ಇ ಕಾಯ್ದೆ 2009 ಮತ್ತು ಕರ್ನಾಟಕ ಶಿಕ್ಷಣ ಕಾಯ್ದೆ 1983ರಡಿಯಲ್ಲಿ ರಚಿತವಾಗಿರುವ ನಿಯಮಗಳ ಅನುಸಾರ ಶಾಲೆಯ ಮಾನ್ಯತೆಯನ್ನು ರದ್ದುಪಡಿಸಲಾಗುವುದು.

21. ಶಾಲಾ ಮಾನ್ಯತೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಆಡಳಿತ ಮಂಡಳಿಯು ಆನ್ ಲೈನ್ ನಲ್ಲಿ ಸಲ್ಲಿಸಿದ ಅರ್ಜಿಯಲ್ಲಿನ ಸಂಪೂರ್ಣ ದಾಖಲೆ/ ಮಾಹಿತಿಗಳನ್ನು ಇಲಾಖಾ ವೆಬ್ ಸೈಟ್ ನಲ್ಲಿ ಸಾರ್ವಜನಿಕವಾಗಿ ವೀಕ್ಷಿಸಲು ಅನುವುಮಾಡಿಕೊಡಲಾಗುವುದು.

22. ಮೇಲಿನ ಷರತ್ತುಗಳನ್ನು ಉಲ್ಲಂಘಿಸಿದ್ದಲ್ಲಿ ಆರ್.ಟಿ.ಇ ಕಾಯ್ದೆ 2009 ಮತ್ತು ಕರ್ನಾಟಕ ಶಿಕ್ಷಣ ಕಾಯ್ದೆ 1983ರಡಿಯಲ್ಲಿ ರಚಿತವಾಗಿರುವ ನಿಯಮಗಳ ಅನುಸಾರ ಶಾಲೆಯ ಮಾನ್ಯತೆಯನ್ನು ರದ್ದುಪಡಿಸಲಾಗುವುದು.

ಉಪನಿರ್ದೇಶಕರು(ಆಡಳಿತ)

ಸಾರ್ವಜನಿಕ ಶಿಕ್ಷಣ ಇಲಾಖೆ

**BENGALURU SOUTH**
**(2920)** ಜಿಲ್ಲೆ

ಗೆ,

1. ಸಂಬಂಧಿಸಿದ ಆಡಳಿತ ಮಂಡಳಿ **M A R K EDUCATIONAL AND CULTURAL TRUST**

2. ಮುಖ್ಯ ಶಿಕ್ಷಕರು, **/SY NO 91 1 AND 91 9 HORAMAVU HOYSALA NAGAR K R PURAM HOBLI BAGALORE EAST /INDIAN SCHOOL OF EXCELLENCE**ಶಾಲೆ ಮತ್ತು ವಿಳಾಸ

3. ಕ್ಷೇತ್ರ ಶಿಕ್ಷಣಾಧಿಕಾರಿಗಳು,**SOUTH4 (292003)** ತಾಲ್ಲೂಕು/ವಲಯ **BENGALURU SOUTH (2920)** ಜಿಲ್ಲೆ.

4. ಕಛೇರಿ ಪ್ರತಿ.

Digitally signed by VIVEKANANDA M
Date: 2026.04.09 19:52:45 +05:30

**Government of Karnataka**
**Department of Public Education**
**Office of the Deputy Director, Department of Public Education,**
**Bengaluru South District**
**First Recognition Certificate**

No. 100896

Date: 04-Apr-2026

Sub: Issuing Recognition to School under the Rules of Children's Right to Education Act – 2009 and the Karnataka Education Act – 1983.

With reference to the above subject, department officials have reviewed the online application for first recognition submitted by the Administrative Committee of **M.A.R.K. EDUCATIONAL AND CULTURAL TRUST** having Dise code **29204101608, INDIAN SCHOOL OF EXCELLENCE, 91/1 and 91/9, Horamavu, Hoysala Nagar, K. R. Puram Hobli, Bangalore East,** for Standard 1 to 8, English Medium, and issued the first recognition as per details given below;

| Sl. No. | Details | Online application No.100896 |
|---|---|---|
| 1 | Name and Address of Governing Body | **M.A.R.K. EDUCATIONAL AND CULTURAL TRUST** |
| 2 | Name and address of the school | **INDIAN SCHOOL OF EXCELLENCE 91/1 AND 91/9, HORAMAVU, HOYSALA NAGAR, K. R. PURAM HOBLI, BANGALORE EAST** |
| 3 | Dise Code Number | **29204101608** |
| 4 | Grades | **1 to 8** |
| 5 | Medium | **English** |
| 6 | Section | **8** |
| 6 | School Type | **Pvt. Unaided / First Recognition** |
| 7 | Year of renewal of recognition | **From 2025 - 2026 up to 2025 - 2026** |

**Conditions :**

1. The school is registered in accordance with the rules framed under the Right to Education Act, 2009, and the Karnataka Education Act, 1983, and the recognition is renewed up to the registered class Apart from these classes, additional classes and extra sections are not permitted.

2. The school shall function as per the rules framed under the Karnataka Education Act 1983 and the Children's Right to Education Act – 2009.

3. As per Children's Right to Education Act – 2009, 25% seats are reserved for weaker sections. Government reserves the right to enroll students to the Schools covered under RTE should reserve seats for which will be registered under RTE. (Government has framed rules the enrollment of children in nearby schools where their parents reside, if there are government funded educational institutions, the children will b enrolled in that school if there are no government funded school(s) otherwise the schools enrolling the children enrolled by the government and continuing their education up to the primary level will allow the disabled children to continue their education without any discrimination.

4. As described in clause 3 the Government releases the fees for children enrolled under RTE as per the rules of RTE. Hence it is prohibited to collect any fees from these children.

5. The school and the school management shall refrain from collecting capitation fee of any kind or voluntary donation from the parents either at the time of enrollment or thereafter.

6. The School / managing committee shall publish the information about school fees on the departmental website and on the notice board as per Government notification No. ED:31:PGC:2019, Dated 27-07-2019. School to refrain from collecting any additional fee.

7. The school / managing board shall enroll the students within the period fixed by the Government

8. The school Governing body cannot refuse enrollment against these factors.
   (i) Due to lack of age proof.
   (ii) Caste, religion, Date of Birth, Place, Language
   (iii) Extension period of admission time

9. All safety measures as per RTE Act and Rules Karnataka Education Act and Rules and safety of learning children as per K.S.C.P.C.R. and N.C.PCR.

10. The School /Governing Body is as follows:
   a. No admitted child shall be held back or expelled from the primary and secondary education classes in the school.
   b. No child will be physically or mentally tortured.
   c. Any child in any board examination till completion of primary education.
   d. Every child who completes primary education is issued a certificate as prescribed in RTE Rule – 21 & C.

NOTARY
CHANDRAKALA
M.A.,LL.B.,
Throughout Bengaluru
Metropolitan Area
Regd. No. 12598
Term Expiry Date:
23.01.2032
GOVT. OF INDIA

e. Children with special needs should also be included in RTE Act and Rules and Karnataka Education and Rules.

f. The appointed teachers possess the minimum educational qualification and are prescribed for primary and high school teachers in the RTE Act and rules and the Karnataka Education Orders.

g. Salary and allowance payable to teachers and terms of service and Government notification (prospective fund (PF) and payable bank are paid and subject to Employee State Insurance (ESI)

h. The teacher shall perform the duties prescribed under section 24 (1) of the Act and the RTE Act and the Rules and regulations and shall not engage in supervision.

11. The school shall follow the prescribed syllabus as stipulated government

12. The Educational Authority to which the school is affiliated is Karnataka Education Act, and Rules are available in the school except as indicated in section - 19, enrollment of students.

13. School buildings and other basic facilities related to the school should not be given over to any commercial activities or political and non-educational activities during the day or night.

14. The school shall not be run for the benefit of any person or group or association.

15. Get the school audited by a Chartered Accountant and submit the copy to the Deputy Director / Field Education Officer by the end of June every year.

16. The school shall follow the language policy as per Government Notification [Kannada Language Policy 2016].

17. Governing Body and Teachers to act as per RTE Act and Karnataka Education Act and Rules.

18. The school / governing body shall strictly follow the rules and directives of the Government and the Department.

19. Mandatory uploading of school information in S.A.T.S. by the end of March every year.

20. In case of violation of the above conditions as per the rules framed under RTE Act 2009 and Karnataka Education Act 1983.The accreditation of the school will be canceled.

21. After completion of school accreditation process complete document in application submitted online by Board of Management! The information will be made available for public viewing on the departmental website.

NOTARY
CHANDRAKALA
Throughout Bengalu
Metropolitan Area
Regd. No. 1259
Term Expiry Date:
23.01.2032
GOVT. OF INDIA

22. Violation of the above conditions will result in the cancellation of the recognition of the school as per the rules framed under the RTE Act 2009 and the Karnataka Education Act 1983.

Sd/=

Deputy Director (Administration)
Department of Public Education
Bangalore North (2928) District

To,

1. The Concerned administrative committee of **M.A.R.K. EDUCATIONAL AND CULTURAL TRUST**
2. Head Master, **91/1 and 91/9, Horamavu, Hoysala Nagar, K. R. Puram Hobli, Bangalore – 560016 INDIAN SCHOOL OF EXCELLENCE** name and address.
3. Block Education Officer, **NORTH 4 (292003)**, Taluk / Zone **BENGALURU NORTH (2920)** District.
4. Office Copy.

**ATTESTED BY ME**

CHANDRAKALA, M.A.,LLB.,
ADVOCATE & NOTARY PUBLIC
GOVT OF INDIA
# 2.. 5th Cross, Indiranagar, Rajajinagar,
WOC Road, BENGALURU-560 010

NOTARY
CHANDRAKALA
Throughout ...
Metropolitan ...
Regd. No. 12...
Term Expiry Date: 23.01.2032
GOVT. OF INDIA

TRANSLATOR SIGN